ಎಂ.ವಿ.ಸಿ. ನಂ.10/2023 ಆರಡಬ್ಲ್ಯೂ -1

(ಇಂದು ದಿನಾಂಕಃ 20-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆಃ ಶ್ರೀ. VRM ಎದುರುದಾರರ ಪರವಕೀಲರಿಂದ**

1. ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಂತಹ ವಿಷಯಗಳು ಸರಿಯಾಗಿವೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ.

- ಅಧಿಕಾರ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿ.ಆರ್-1 ಎಂದು, ಗುರುತಿಸಲಾಯಿತು.
- ವಿಮೆ ಪಾಲಿಸಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಆರ್-2 ಎಂದು, ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ SSA ಅರ್ಜಿದಾರ ಪರ ವಕೀಲರಿಂದಃ**

ಅಪಘಾತವಾದಾಗ ಪಾಲಿಸಿ ಚಾಲನೆಯಲ್ಲಿ ಇತ್ತು ಎಂದರೆ ಸರಿ. ಸಿ.ಸಿ ನಂಬರ 484/2019 ರಲ್ಲಿ ಕ್ರೈಂ ನಂಬರ 187/2018 ನೇದ್ದರ ಎಲ್ಲಾ ದಾಖಲಾತಿಗಳನ್ನು ನೋಡಿರುತ್ತೇವೆ. ಅಂತಿಮ ವರದಿಯನ್ನು ಪೋಲೀಸರು ಸರಿಯಾದ ರೀತಿಯಲ್ಲಿ ತನಿಖೆ ಮಾಡಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ವಾಹನದಿಂದ ಅಪಘಾತ ವಾಗಿರುತ್ತದೆ ಎಂದು ತನಿಖಾಧಿಕಾರಿಗಳು ಸರಿಯಾಗಿ ತನಿಖೆ ಮಾಡಿ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸುಳ್ಳು ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ಅಂತಿಮ ವರದಿಯನ್ನು ನಾವು ಪ್ರಶ್ನಿಸಿರುವುದಿಲ್ಲ. ಅರ್ಜಿದಾರ ಮದ್ಯವನ್ನು ಸೇವಿಸಿ ತನ್ನ ತಪ್ಪಿ ನಿಂದ ತಾನೇ ಅಪಘಾತ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರನ ವಿರುದ್ದ ಯಾವುದೇ ಆರೋಪವನ್ನು ಅಂತಿಮ ವರದಿಯಲ್ಲಿ ಸಲ್ಲಿಸಿಲ್ಲ ಎಂದರೆ ಸರಿ. ಆದರೆ ಆತನ ಮೇಲೆ ಆರೋಪ ಮಾಡಬೇಕಾಗಿತ್ತು. ಆರೋಪಿಯು ಚಾಲನ ಪರವಾನಗಿ ಹೊಂದಿಲ್ಲವೆಂದು ಆತನಿಗೆ ನಾವು ನೋಟಿಸು ನೀಡಿರುವುದಿಲ್ಲ. ಆದರೆ ಅಂತಿಮ ವರದಿಯಲ್ಲಿ ಕಲಂ 181 MV Act ಆರೋಪವನ್ನು ದಾಖಲಿಸಿರುತ್ತಾರೆ. ಆರೋಪಿಯು ಚಾಲನ ಪರವಾನಗಿ ಹೊಂದಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕಂಪನಿಗೆ ಒಳಪಟ್ಟ ಇನ್ಸೂರೆನ್ಸ ವಾಹನದಿಂದ ಅಪಘಾತವಾಗಿದ್ದರೂ ಪರಿಹಾರವನ್ನು ಕೊಡಬಾರದು ಅನ್ನುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ವಿಷಯಗಳು ಸುಳ್ಳು ಇರುತ್ತವೆ ಎಂದರೆ ಸರಿ ಅಲ್ಲ. ನನ್ನ ಸಾಕ್ಷಿ ಪ್ರಮಾಣಪತ್ರದ ಕಂಡಿಕೆ 5 ರಲ್ಲಿ ನಮೂದಿಸಿರುವ ಸಂಗತಿಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.